

ಚಹರೆಯನ್ನೇ ಹೋಲುವ ಶಿಲ್ಪಾಕೃತಿಯನ್ನು ಬಿಡಿಸಿರುವನೆಂದವಳಿಗೆ ಭಾಸವಾಯಿತು. ಅದು ಥೇಟ್ ಮಿಸೆಸ್ ಮಲೀಕ್‌ಳನ್ನೇ ಹೋಲುತ್ತಿತ್ತು. ಮಿಸೆಸ್ ಮಲೀಕ್‌ಳಷ್ಟೇ ಎತ್ತರವಾಗಿದ್ದು, ಅವಳು ನಿಲ್ಲುವ ಭಂಗಿಯಲ್ಲಿಯೇ ನಿಂತಿತ್ತು. ಮಿಸೆಸ್ ಮಲೀಕ್ ಮತ್ತೆ ಮತ್ತೆ ಆ ಆಕೃತಿಯನ್ನು ನೋಡಿ ತನ್ನ ಬಗ್ಗೆ ತಾನೇ ಹೆಮ್ಮೆಪಟ್ಟಳು. ಅಷ್ಟಕ್ಕೆ ಸುಮ್ಮನಿರದೆ ತನ್ನ ಕೋಣೆಯಲ್ಲಿರುವ ಡ್ರೆಸ್ಸಿಂಗ್ ಟೇಬಲ್‌ಗೆ ಹೋಗಿ, ಕನ್ನಡಿಯಲ್ಲಿ ಆ ಶಿಲ್ಪಾಕೃತಿಯು ನಿಂತುಕೊಂಡ ಭಂಗಿಯಲ್ಲೇ ನಿಂತುಕೊಳ್ಳುತ್ತಾ, ಮತ್ತೆ ಮತ್ತೆ ಅದನ್ನೇ ಅನುಕರಿಸುತ್ತಾ ತನ್ನ ಪ್ರತಿಬಿಂಬವನ್ನು ತಾನೇ ನೋಡಿಕೊಂಡು ಹೆಮ್ಮೆಯಿಂದ ಬೀಗಿದಳು. ಮಿಸೆಸ್ ಮಲೀಕ್ ಮನೆಗೆ ಹೋದ ತಕ್ಷಣ ಆ ಪ್ರತಿಮೆಯನ್ನು ತನ್ನ ಸೊಸೆಗೆ ತೋರಿಸಬೇಕೆಂದುಕೊಂಡಳು.

ಅವಳ ಸೊಸೆ ಮುಂದಿನ ಸೀಟಿನಲ್ಲಿ ತನ್ನ ಗಂಡನ ಪಕ್ಕದಲ್ಲಿ ಕುಳಿತಿದ್ದಳು. ಅಲ್ಲಿ ಕಾರಿನ ಹಿಂಭಾಗದ ವಾಹನಗಳನ್ನು ವೀಕ್ಷಿಸಲಿಟ್ಟಿದ್ದ ಕನ್ನಡಿಯನ್ನು ತನ್ನೆಡೆಗೆ ತಿರುಗಿಸಿಕೊಳ್ಳುತ್ತಾ ಮತ್ತೊಂದು ಪದರು ಲಿಪ್‌ಸ್ಟಿಕ್‌ನ್ನು ಹಾಕಿಕೊಂಡಳು. 'ಇಷ್ಟೊತ್ತಲ್ಲಿ, ಅದೂ ಸ್ವಂತ ಮನೆಗೆ ಹೋಗುವಾಗ ಲಿಪ್‌ಸ್ಟಿಕ್‌ನ್ನು ಹಾಕಿಕೊಳ್ಳುವ ಅಗತ್ಯವಾದರೂ ಏನಿದೆ? ಮನೆಗೆ ಹೋದ ಮೇಲೆ ಹೆಚ್ಚೆಂದರೆ ಊಟಮಾಡುವುದು, ಮಲಗುವದಷ್ಟೇ! ಅಷ್ಟಕ್ಕೆ ಲಿಪ್‌ಸ್ಟಿಕ್ ಯಾಕೆ ಬೇಕು? ಏನು ವಿಚಿತ್ರಾನೋ ಈಗಿನ ಕಾಲದ ಹುಡುಗಿಯರ ನಡವಳಿಕೆಗಳು! ಮತ್ತವಳು ಅದ್ಹೇಗೆ ಒಂದೇ ಸಮನೇ ಅದೇನೇನೇನೋ ಇಂಗ್ಲಿಷಿನಲ್ಲಿ ವಟಗುಟ್ಟುತ್ತಲೇ ಇದ್ದಳು! ಸ್ವಂತ ಗಂಡನ ಜೊತೆ ಇಂಗ್ಲಿಷಿನಲ್ಲಿ ಮಾತನಾಡುವ ಅವಶ್ಯಕತೆಯಾದರೂ ಏನಿದೆ?' ಮಿಸೆಸ್ ಮಲೀಕ್ ತನಗೆ ತಾನೇ ಹೇಳಿಕೊಳ್ಳುತ್ತಾ ಅಸಹನೆಯಿಂದ ಕುದಿದಳು.

ಮಿಸೆಸ್ ಮಲೀಕ್‌ಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಇದೊಂದರಲ್ಲಿ ಮಾತ್ರ ಆಕೆ ಹಿಂದಿದ್ದಳು. ಆದರೆ ಮಿಕ್ಕೆಲ್ಲ ವಿಷಯಗಳಲ್ಲಿ ಒಂದು ಕೈ ಹೆಚ್ಚೇ ಮುಂದಿದ್ದಳು. ಆಧುನಿಕ ಬದುಕಿನ ರೀತಿನೀತಿಗಳಿಗೆ ತನ್ನನ್ನು ಚನ್ನಾಗಿ ಒಗ್ಗಿಸಿಕೊಂಡಿದ್ದಳು. ಗಂಡನ ಜೊತೆ ಕ್ಲಬ್ಬಿಗೆ ಹೋಗುತ್ತಿದ್ದಳು. ಅಲ್ಲಿ ಕಾರ್ಡ್ಸ್ ಆಡುತ್ತಿದ್ದಳು. ವಿವಿಧ ಆಟಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಳು. ಸ್ನೇಹಿತರೊಟ್ಟಿಗೆ ವಯ್ಯಾರವಾಗಿ ಬಳುಕುತ್ತಾ ಕುಡಿಯುವುದನ್ನು ಕಲಿತುಕೊಂಡಿದ್ದಳು. ಜೊತೆಗೆ ಕುಣಿಯುವುದನ್ನು